# ಸ್ನೇಹಕ್ಕೆ ಯಾವುದೇ ಹುದ್ದೆ ಅಂತಸ್ತುಗಳು ಅಡ್ಡಿ ಆಗುವುದಿಲ್ಲ ಎನ್ನುವುದಕ್ಕೆ ಈ ಅಪರೂಪದ ಜೋಡಿಯೇ ನಿದರ್ಶನ

ಗದಗ, 4. ಮೂರು ಬಾರಿ ಸಭಾಪತಿಯಾದ ಬಸವರಾಜ್ ಹೊರಟ್ಟಿ ಅವರು ಹಾಗೂ ಎರಡು ಬಾರಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಸ್ನೇಹ ನಾಲ್ಕು ದಶಕಗಳಿಗೂ ಹಳೆಯದು. ದಶಕಗಳ ಹಿಂದೆ ಒಂದೇ ಪಕ್ಷದಲ್ಲಿ ಇದ್ದವರು. ಅನಿವಾರ್ಯ ಕಾರಣಗಳಿಂದ ಪಕ್ಷಗಳನ್ನು ಬದಲಾಯಿಸಿದರು ಅವರ ಸ್ನೇಹಕ್ಕೆಂದು ಚ್ಯುತಿ ಬರದ ಹಾಗೆ ನೋಡಿಕೊಂಡ ಸ್ನೇಹಿತರ ಜೋಡಿ ಇದು.

ಬಸವರಾಜ್ ಹೊರಟ್ಟಿ ಅವರು 1980 ರಲ್ಲಿ ಶಾಸನಸಭೆ ಪ್ರವೇಶಿಸಿದರೆ ಸಿದ್ದರಾಮಯ್ಯನವರು 1982 ರ ನಂತರ ಶಾಸನಸಭೆ ಪ್ರವೇಶಿಸಿದರು. ಇಬ್ಬರ ಅನುಭವಕ್ಕೂ ಎರಡೇ ವರ್ಷದ ಅಂತರ,ವ್ಯತ್ಯಾಸ. ವಯಸ್ಸು ಕೂಡ ಒಂದೆರಡು ವರ್ಷ ಅಷ್ಟೇ ವ್ಯತ್ಯಾಸ. 75ರ ಆಸು ಪಾಸು. ಇಬ್ಬರೂ ಕ್ರೀಡಾಪಟುಗಳು. ಆರೋಗ್ಯದ ಬಗ್ಗೆ ಸದಾ ಗಮನವಿಟ್ಟುಕೊಂಡು ಆರೋಗ್ಯವನ್ನು ಕಾಪಾಡಿಕೊಂಡು ಬಂದವರು.



ಶಾಸಕರ ಕ್ರೀಡಾಕೂಟದಲ್ಲಿ ಅತ್ಯಂತ ಕ್ರೀಯಾಶೀಲರಾಗಿ ಇಬ್ಬರು ಭಾಗವಹಿಸುತ್ತಾ ಬಂದಿದ್ದಾರೆ. ಒಂದು ಬಾರಿ ಕುಸ್ತಿ ಆಡಿ ಕುಸ್ತಿ ಪಂದ್ಯದಲ್ಲಿ ಸಿದ್ದರಾಮಯ್ಯನವರೇ ಮೇಲುಗೈ ಸಾಧಿಸಿ ಹೊರಟ್ಟಿ ಅವರನ್ನು ಚಿತ್ತ ಮಾಡಿದರು. ಈ ಸಂಗತಿಯನ್ನು ಇಬ್ಬರು ಆಗಾಗ ನೆನಪಿಸಿಕೊಂಡು ಕಿಚಾಯಿಸುತ್ತಾರೆ.

**(ಕೊನೆಯ ಪುಟಕ್ಕೆ)....**

# ಬಸವರಾಜ್ ಹೊರಟ್ಟಿ ಅವರ ನೇತೃತ್ವದಲ್ಲಿ ಶೈಕ್ಷಣಿಕ ಜ್ವಲಂತ ಸಮಸ್ಯೆಗಳ ಕುರಿತು ಸಭೆ



ಹುಬ್ಬಳ್ಳಿ: ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಮಧು ಬಂಗಾರಪ್ಪನವರು ಇಂದು ಮುಂಜಾನೆ ಬೆಂಗಳೂರಿನ ವಿಧಾನಸೌಧದ ಸಭಾಂಗಣದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ಪದವೀಧರ ಹಾಗೂ ಶಿಕ್ಷಕರ ಮತಕ್ಷೇತ್ರದ ಪ್ರತಿನಿಧಿಗಳ ಸಭೆಯನ್ನ ಆಯೋಜಿಸಿ ಜ್ವಲಂತ ಸಮಸ್ಯೆಗಳ ಕುರಿತು ಸುಧೀರ್ಘವಾಗಿ ಚರ್ಚಿಸಿ ಹಲವಾರು ಮಾಹಿತಿ ಪಡೆದರು. ಶೈಕ್ಷಣಿಕ ಗುಣಮಟ್ಟದ ಬಗ್ಗೆ ಚರ್ಚಿಸಿ ವಿಶೇಷ ಕಾರ್ಯ ಯೋಜನೆ ಮಾಡುವ ಕುರಿತು ಹಲವಾರು ಸಲಹೆಗಳನ್ನು ಪಡೆದರು.

ಶಿಕ್ಷಕರ ನೇಮಕ ಪ್ರಸ್ತುತ ಶಿಕ್ಷಕರ ಸಮಸ್ಯೆಗಳು ಕುರಿತು ಕೂಡ ಹಲವಾರು ವಿಧಾನಪರಿಷತ್ ಸದಸ್ಯರು ಸಚಿವರ ಗಮನಕ್ಕೆ ತಂದರು ತಕ್ಷಣ ಈ ಕುರಿತು ಉನ್ನತ ಅಧಿಕಾರಿಗಳೊಂದಿಗೆ ಚರ್ಚಿಸಿ ಸಂಪೂರ್ಣ ಮಾಹಿತಿ ಪಡೆದು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಪರಿಹಾರ ಸೂಚಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಭೋಜೇಗೌಡ, ಶ್ರೀಮರಿತಿಬ್ಬೆಗೌಡ, ಶ್ರೀ ಪ್ರಕಾಶ್ ಹುಕ್ಕೇರಿ, ಶ್ರೀ ಮಧು. ಮಾದೇಗೌಡ ಸೇರಿದಂತೆ ಇನ್ನುಳಿದ ವಿಧಾನ ಪರಿಷತ್ ಸದಸ್ಯರು ಭಾಗವಹಿಸಿದ್ದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಸಿಂಗ್, ಆಯುಕ್ತರಾದ .ಪಿ.ಬಿ ಕಾವೇರಿ ,ಪಿ.ಯು ಶಿಕ್ಷಣ ಇಲಾಖೆ ನಿರ್ದೇಶಕರಾದ ಶ್ರೀಮತಿ ಸಿಂಧು ರೂಪೇಶ , ಸಭಾಪತಿ ಅವರ ವಿಶೇಷ ಕರ್ತವ್ಯ ಅಧಿಕಾರಿಗಳಾದ ಡಾ. ಮಹೇಶ ವಾಳ್ವೇಕರ್ ಸೇರಿದಂತೆ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಸಭಾಪತಿ ಹೊರಟ್ಟಿ ಅವರೊಂದಿಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಸಮಾಲೋಚನೆ



ಗದಗ, ಜು. 4. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಮಧು ಬಂಗಾರಪ್ಪನವರು ಶಿಕ್ಷಣ ಸಚಿವರಾದ ಮೇಲೆ ಮೊದಲ ಬಾರಿಗೆ ಗೌರವಾನ್ವಿತ ಸಭಾಪತಿಗಳಾದ ಬಸವರಾಜ್ ಹೊರಟ್ಟಿ ಅವರನ್ನು ಭೇಟಿಯಾಗಿ ಶುಭ ಕೋರಿದರು.

ನಂತರ ಜ್ವಲಂತ ಶೈಕ್ಷಣಿಕ ಸಮಸ್ಯೆಗಳ ಜೊತೆಗೆ ಶಿಕ್ಷಕರ ಪ್ರಮುಖ ಸಮಸ್ಯೆಗಳ ಕುರಿತು ಸುಧೀರ್ಘವಾಗಿ ಚರ್ಚಿಸಿದರು. ಅಲ್ಲದೇ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳ ಸಿಬ್ಬಂದಿ ಕಳೆದ 28 ವರ್ಷಗಳಿಂದ ಅನುದನಕ್ಕಾಗಿ ಹೋರಾಡುತ್ತಿರುವ ವಿಷಯವನ್ನು ಕೂಡಾ ಸಚಿವರ ಗಮನಕ್ಕೆ ತಂದರು.

ಶಿಕ್ಷಣದ ಸಮಗ್ರ ಸುಧಾರಣೆಗೆ ಬದಲಾವಣೆಗೆ ತಮ್ಮದೇ ಆದ ವಿಚಾರಗಳನ್ನು ವ್ಯಕ್ತಪಡಿಸಿದ ಸಚಿವರು ಬಸವರಾಜ ಹೊರಟ್ಟಿ ಅವರ ಸಲಹೆ ಮಾರ್ಗದರ್ಶನವನ್ನು ಕೋರಿದರು. ಸಭಾಪತಿ ಬಸವರಾಜ ಹೊರಟ್ಟಿ ಅವರ ನಾಲ್ಕು ದಶಕಗಳ ಸುದೀರ್ಘ ಅನುಭವದ ಕುರಿತು ಮಾಹಿತಿ ಪಡೆದ ಸಚಿವರು ಒಂದೇ ಕ್ಷೇತ್ರದಿಂದ ಸತತ ಎಂಟು ಬಾರಿ ಆಯ್ಕೆಯಾಗಿ ಐತಿಹಾಸಿಕ ದಾಖಲೆ ಮಾಡಿದ ಕುರಿತು ಕೇಳಿ ಆಶ್ಚರ್ಯ ವ್ಯಕ್ತಪಡಿಸಿದರು.

ದೇಶದಲ್ಲಿಯೇ ಮೊದಲ ಸಾಧನೆ ಮಾಡಿದ ಏಕೈಕ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗುವುದರ ಜೊತೆಗೆ ಕನ್ನಡಿಗರ ಕೀರ್ತಿ ಹೆಚ್ಚಿಸಿದ್ದೀರಿ ಎಂದು ಹೇಳಿ ಇದು ಕನ್ನಡಿಗರೆಲ್ಲರ ಹೆಮ್ಮೆ ಹಾಗೂ ಹೆಗ್ಗಳಿಕೆ ಎಂದು ಖುಷಿ ಪಟ್ಟರು. ಕಾಲಕಾಲಕ್ಕೆ ತಮ್ಮ ಸಲಹೆ ಸೂಚನೆಗಾಗಿ ಆಗಮಿಸುತ್ತೇನೆ ತಮ್ಮ ಸಹಕಾರ ಮಾರ್ಗದರ್ಶನ ಸದಾ ಇರಲಿ ಎಂದು ಕೋರಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾತನಾಡಿ ಸಾಕಷ್ಟು ಕೆಲಸಗಳನ್ನು ಮಾಡಲು ಇಲ್ಲಿ ಅವಕಾಶ ಇದೆ ಅದರ ಸದುಪಯೋಗ ಪಡೆದುಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ನಿಮ್ಮದೇ ಆದ ಸಾಧನೆ ಮಾಡಿ ಹೆಜ್ಜೆ ಗುರುತುಗಳನ್ನು ಮೂಡಿಸುವಂತಾಗಲಿ ಎಂದು ಆಶಿಸಿದರು. ನನ್ನ ಸಹಕಾರ ಬೆಂಬಲ ಮಾರ್ಗದರ್ಶನ ಸದಾ ಇರುತ್ತದೆ ಎಂದು ಹೇಳಿ ಶುಭ ಕೋರಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ತಿನಲ್ಲಿ ಕಾಂಗ್ರೇಸ್ ಪಕ್ಷವನ್ನು ಪ್ರತಿನಿಧಿಸುವ ಸಚೇತಕರಾದ ಸಲೀಂ ಅಹ್ಮದ್ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.